



ಅರುಣ ಪಿ. ಭಟ್ಟ


## ವಾರದ ಭವಿಷ್ಯ: 10.04.2025ರಿಂದ 16.04.2025ರವರೆಗೆ




ವಾರದ ಶುರುವಿನಿಂದಲೇ ಉತ್ಸಾಹದಿಂದ ಕಾಣಿಸಿಕೊಳ್ಳುತ್ತೀರಿ. ನಿಮ್ಮ ವೈಯಕ್ತಿಕ ಶ್ರಮದಿಂದ ಹೆಚ್ಚಿನ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ. ಅದರಿಂದ ಹಲವು ಕೆಲಸ ಕಾರ್ಯಗಳನ್ನು ಪೂರೈಸಲಾಗುತ್ತದೆ. ಇನ್ನು ನಿಮ್ಮ ಸಹೋದ್ಯೋಗಿಗಳ ಜೊತೆ ಭಿನ್ನಾಭಿಪ್ರಾಯಗಳನ್ನು ಮರೆಯಲು ಪ್ರಯತ್ನ ಮಾಡುತ್ತೀರಿ. ನಿಮ್ಮ ಕೆಲಸ ಕಾರ್ಯಗಳ ವಿಸ್ತರಣೆ ಮಾಡಲಿದ್ದೀರಿ. ಶುಭದಿನ: 11. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.

ಶುಭ ಕಾರ್ಯವನ್ನು ಆಯೋಜಿಸುವ ಸಾಧ್ಯತೆ ಇದೆ. ಈ ವಾರ ಗ್ರಹಗತಿಗಳು ನಿಮಗೆ ಅನುಕೂಲಕರವಾಗಿವೆ. ಅತಿ ಮುಖ್ಯವಾದ ಕೆಲಸಗಳನ್ನು ಮಾಡಿಕೊಂಡು ಬಿಡಿ. ಉದ್ಯೋಗ ಸ್ಥಳದಲ್ಲಿ ನಿಮ್ಮ ಗೌರವ, ವರ್ಚಸ್ಸು ಹೆಚ್ಚುವ ಸಾಧ್ಯತೆ ಇದೆ. ಸಹೋದ್ಯೋಗಿಗಳ ಜೊತೆ ನಿಮ್ಮ ಬಾಂಧವ್ಯ ಗಟ್ಟಿ ಆಗಲಿದೆ. ಬಾಕಿ ಕೆಲಸಗಳನ್ನು ಪೂರ್ಣಗೊಳಿಸುತ್ತೀರಿ. ಶುಭದಿನ: 14. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಆರೋಗ್ಯ ಸುಧಾರಿಸುವುದು. ಅಕಸ್ಮಾತ್ ಖರ್ಚು ಸಂಭವ. ಆಸ್ತಿ ಖರೀದಿ ಬಗ್ಗೆ ಚಿಂತನೆ. ಕಲಾವಿದರಿಗೆ ಸಾಹಿತಿಗಳಿಗೆ ಉತ್ತಮ ವಾರ ರಾಜಕೀಯದ ಅವಕಾಶ. ಸಂಘ ಸಂಸ್ಥೆಗಳಿಂದ ಧನಲಾಭ. ಶತ್ರುಗಳು ಹಿಂದೆ ಸರಿಯುವರು. ವೃತ್ತಿ ವ್ಯವಹಾರದಲ್ಲಿ ಲಾಭ ವ್ಯಾವಹಾರಿಕ ಅನುಕೂಲತೆ. ಸರಕಾರಿ ಕೆಲಸ ಶೀಘ್ರ ಆಗುವುದು. ತಮಗೆ ಮನ್ನಣೆ ದೊರೆಯುವುದು. ಶುಭದಿನ: 15. ಚಂಡಿ ಪಾರಾಯಣ ಮಾಡಿರಿ.

ನವೋಲ್ಲಾಸ ಬರುವುದು. ಧರ್ಮದಾನಕ್ಕಾಗಿ ಖರ್ಚು. ಮಿತ್ರರಿಗೆ ಸಹಾಯ. ವ್ಯಾಪಾರದಲ್ಲಿ ಅಧಿಕ ಲಾಭ. ಹಳೆಯ ಮಿತ್ರರ ಆಗಮನ. ಹಲವು ದಿನಗಳ ಸಮಸ್ಯೆ ಬಗೆಹರೆಯುವುದು. ಹೊಟ್ಟೆನೋವಿನ ಕಾಟ. ಮನೆಯಲ್ಲಿ ಸಂಭ್ರಮ. ಮಕ್ಕಳಿಂದ ಶುಭವಾರ್ತೆ. ಮಹತ್ವದ ಕಾಗದ ಪತ್ರಗಳ ರಕ್ಷಣೆ. ಸಹೋದರರ ಸಹಾಯ. ಕಾನೂನಿಗೆ ಸಂಬಂಧಿಸಿದ ವಿಚಾರಗಳಲ್ಲಿ ತೊಡಗಬೇಕಾಗುತ್ತದೆ. ಶುಭದಿನ: 13. ಶಿವ ಕವಚ ಓದಿರಿ.









ಕುಟುಂಬ ಸದಸ್ಯರ ಜೊತೆಗೆ ಹೆಚ್ಚಿನ ಸಮಯ ಕಳೆಯುವ ಸಾಧ್ಯತೆ ಇದೆ. ಕುಟುಂಬದ ಸದಸ್ಯರಿಗೆ ಕೆಲವು ಕೆಲಸಗಳನ್ನು ವಹಿಸುತ್ತೀರಿ. ಅವುಗಳನ್ನು ತುಂಬ ಶ್ರದ್ಧೆಯಿಂದ ಅವರು ಮಾಡಿ ಮುಗಿಸುತ್ತಾರೆ. ಈ ಹಿಂದೆಂದಿಗಿಂತಲೂ ಈ ವಾರ ಹೆಚ್ಚು ಚಟುವಟಿಕೆಯಿಂದ ನೀವು ಇರಬೇಕಾಗುತ್ತದೆ. ಭೂ ವ್ಯಾಜ್ಯವೊಂದಕ್ಕೆ ಶ್ರಮ ಹಾಕಲಿದ್ದೀರಿ. ಶುಭದಿನ: 15. ಸೌಂದರ್ಯಲಹರಿ ಪಠಿಸಿರಿ.

ತಾಂತ್ರಿಕ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಸಾಧ್ಯ ಆಗುತ್ತದೆ. ನಿಮ್ಮಲ್ಲಿ ಆಗುತ್ತಿರುವ ಸಕಾರಾತ್ಮಕ ಪರಿಣಾಮ ಅನುಭವಕ್ಕೆ ಬರುತ್ತದೆ. ಕುಟುಂಬದೊಳಗೆ ಸಂತಸದ ವಾತಾವರಣ ಇರುತ್ತದೆ. ಈವರೆಗಿನ ನಿಮ್ಮ ಆದಾಯ ಮೂಲಗಳಿಂದ ಬರುವ ಗಳಿಕೆ ಮತ್ತಷ್ಟು ಹೆಚ್ಚಾಗಲಿದೆ. ನಿಮ್ಮ ಹಣದ ಮೂಲವನ್ನು ಸರಿಯಾದ ದಾರಿಯಲ್ಲಿ ವಿತರಿಸಲು ಯಶಸ್ಸು ಸಾಧಿಸುತ್ತೀರಿ. ಶುಭದಿನ: 12. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.





ವೃತ್ತಿಪರ ಬದುಕಿನಲ್ಲಿ ಲಾಭ ಹಾಗೂ ಮಹತ್ತರವಾದ ಪ್ರಗತಿ ಕಾಣುವ ಯೋಗ ಇದೆ. ಸಂದರ್ಶನಗಳಲ್ಲಿ ಭಾಗವಹಿಸುವವರು ಅನುಕೂಲಕರ ಫಲಿತಾಂಶ ನಿರೀಕ್ಷಿಸಬಹುದು. ಮನೆಗೆ ಎಲೆಕ್ಟ್ರಾನಿಕ್ ವಸ್ತುಗಳ ಖರೀದಿ ಮಾಡಲಿದ್ದೀರಿ. ಸೇವಾ ವಲಯದಲ್ಲಿ ಕಾರ್ಯ ನಿರ್ವಹಿಸುವವರಿಗೆ ಪ್ರತಿಭೆಯನ್ನು ಪ್ರದರ್ಶಿಸಲು,  ಬಡ್ತಿ ಪಡೆಯಲು ಅತ್ಯುತ್ತಮ ಅವಕಾಶಗಳಿವೆ. ಶುಭದಿನ: 15. ದೇವ್ಯಪರಾದ ಕ್ಷಮಾಪನಾ ಸ್ತೋತ್ರ ಪಠಿಸಿರಿ.


ಮುಖ್ಯವಾದ ಪಟ್ಟಿಯೊಂದನ್ನು ಸಿದ್ಧತೆಗೆ ವಾರದ ಶುರುವಿನಲ್ಲಿ ಸಿದ್ಧರಾಗುತ್ತೀರಿ. ಹಿರಿಯ ಅಧಿಕಾರಿಗಳು ಬೇಸರಿಸಿಕೊಳ್ಳುತ್ತಾರೆ. ಈ ಅವಧಿಯಲ್ಲಿ ತಾಳ್ಮೆ ಮತ್ತು ಧೈರ್ಯ ಮುಖ್ಯವಾಗುತ್ತದೆ. ಸಮಯದ ಕೊರತೆ ವಿಪರೀತವಾಗಿ ಕಾಡುತ್ತದೆ. ವಾರದ ಮಧ್ಯ ಭಾಗದಲ್ಲಿ ವ್ಯಾಪಾರ ವ್ಯವಹಾರಗಳ ವಿಸ್ತರಣೆಗೆ ಶ್ರಮ ಹಾಕುತ್ತೀರಿ. ಆರೋಗ್ಯ ಉತ್ತಮವಾಗಿರುತ್ತದೆ. ಶುಭದಿನ: 16. ಶ್ರೀ ದುರ್ಗಾಪಾರಾಯಣ ಮಾಡಿರಿ.





ಆಸ್ತಿ ಖರೀದಿಗೆ ಸಂಬಂಧಪಟ್ಟ ಕಾಗದಪತ್ರಗಳನ್ನು ಪರಿಶೀಲನೆ ನಡೆಸಲಿದ್ದೀರಿ. ದೊಡ್ಡ ಪ್ರಮಾದಗಳನ್ನು ತಡೆಯುವಂತೆ ಸನ್ನಿವೇಶಗಳು ನಿಮಗೆ ಪೂರಕ ಆಗಲಿದೆ. ಆದರೆ ಈ ಸಮಯದಲ್ಲಿ ಆರೋಗ್ಯ ಸ್ಥಿತಿ ಪೂರಕವಾಗಿಲ್ಲ. ಇದರಿಂದ ಚಿಂತೆಗೆ ಒಳಗಾಗುತ್ತೀರಿ. ಇನ್ನು ವೈಯಕ್ತಿಕ ಸಂಬಂಧದಲ್ಲಿ ಕೆಲವು ಕಹಿ ಬೆಳವಣಿಗೆಗಳು ಆಗಲಿವೆ. ಶುಭದಿನ: 12. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.

ವಾರದ ಶುರುವಿನಲ್ಲೇ ವ್ಯಾಪಾರದಲ್ಲಿ ಪ್ರಗತಿ ಕಾಣಿಸುತ್ತದೆ. ಎಷ್ಟೇ ಒತ್ತಡದ ಕೆಲಸ ಇದ್ದರೂ ಆರಾಮವಾಗಿ ಪೂರೈಸಲು ನಿಮ್ಮಿಂದ ಸಾಧ್ಯವಾಗಲಿದೆ. ವೈವಾಹಿಕ ಜೀವನ ಸಂತೋಷದಾಯಕವಾಗಿ ಇರುತ್ತದೆ. ಉದ್ಯೋಗ ನಿಮಿತ್ತವಾಗಿ ಪ್ರಯಾಣ ಮಾಡಬೇಕಾಗುತ್ತದೆ. ಮುಖ್ಯವಾದ ಕೆಲಸ ಕಾರ್ಯ ಮುಂದೂಡಬೇಕಾದ ಸನ್ನಿವೇಶ ಎದುರಾಗುತ್ತದೆ. ಶುಭದಿನ: 11. ಕಾಲಭೈರವನ ಸೇವೆ ಮಾಡಿರಿ.




ವಾರದ ಶುರುವಿನಲ್ಲಿ ನಿಮ್ಮ ಹಣದ ಸದುಪಯೋಗ ಮಾಡಿಕೊಳ್ಳುತ್ತೀರಿ. ಮಾರಾಟ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಲಾಭದ ಅವಕಾಶಗಳಿವೆ. ನೀವು ಹಾಕಿಕೊಂಡ ಗುರಿಯನ್ನು ಅಂದುಕೊಂಡ ಸಮಯಕ್ಕಿಂತ ಮುಂಚಿತವಾಗಿಯೇ ತಲುಪುವ ಸಾಧ್ಯತೆಗಳಿವೆ. ಪ್ರೀತಿ ಪ್ರೇಮದಲ್ಲಿ ಇರುವವರು ಸಂಗಾತಿಯ ಭಾವನೆಗಳಿಗೆ ಗೌರವ ನೀಡುತ್ತೀರಿ. ಶುಭದಿನ: 12. ಗಣಪತಿಗೆ ದೂರ್ವಾರ್ಚನೆ ಮಾಡಿರಿ.

ಉನ್ನತ ಶಿಕ್ಷಣಕ್ಕೆ ಯತ್ನಿಸುತ್ತಿರುವವರಿಗೆ ಯಶಸ್ಸು ದೊರೆಯುವ ಸಾಧ್ಯತೆ ಹೆಚ್ಚಿದೆ. ದೇವತಾ ಆರಾಧನೆಗೆ ನಿಮ್ಮ ಶ್ರಮ ಹಾಕುತ್ತೀರಿ. ಬಹಳ ಒತ್ತಡ ಹಾಕಿ ನಿಮ್ಮಿಂದ ಕೆಲಸ ತೆಗೆಸುವ ಯತ್ನಗಳಾಗುತ್ತವೆ. ಉದ್ಯೋಗ ಸ್ಥಳದಲ್ಲಿ ಭಾವನಾತ್ಮಕವಾಗಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಲಿದ್ದೀರಿ. ವೃತ್ತಿಪರ ಜೀವನದಲ್ಲಿ ಅತ್ಯುತ್ತಮವಾದ ಬೆಳವಣಿಗೆ ಇದೆ. ಶುಭದಿನ: 10. ಕನಕಧಾರಾ ಸ್ತೋತ್ರ ಪಠಣ ಮಾಡಿರಿ.

